**<u>ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ದಾವಣಗೆರೆ.</u>**

**<u>SC.146/2022</u>**

| | | |
|---|---|---|
| ಸಾಕ್ಷಿದಾರರ ಹೆಸರು | : | ಕೋದಂಡರಾಮು |
| ತಂದೆಯ ಹೆಸರು | : | ವೆಂಕಟಪ್ಪ |
| ವಯಸ್ಸು | : | 52 ವರ್ಷ |
| ಉದ್ಯೋಗ | : | ಉಪನಿರ್ದೇಶಕರು, ಗಣಿ ಮತ್ತು ಭೂ ವಿಜ್ಞಾನ ಇಲಾಖೆ, ಕೋಲಾರ |
| ವಾಸ ಸ್ಥಳ | : | ಕೋಲಾರ |

ಪಿ.ಡಬ್ಲ್ಯೂ 4

ಸಿ.ಡಬ್ಲ್ಯೂ 6

ದಿ: 27-02-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**<u>ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ (ಸತೀಶ್ )</u>**:

1. ದಿಃ 06-12-2018 ರಿಂದ 06-10-2021 ರವರೆಗೆ ನಾನು ದಾವಣಗೆರೆಯಲ್ಲಿ ಹಿರಿಯ ಭೂ ವಿಜ್ಞಾನಯಾಗಿ ಕೆಲಸ ಮಾಡಿದ್ದೇನೆ. ದಿಃ 31-03-2021 ರಂದು ವೃತ್ತ ನಿರೀಕ್ಷಕರು ಚಾಸಾ-21 ರವರು ಸಲ್ಲಿಸಿದ ಮನವಿ ಪತ್ರವನ್ನು ನಾನು ದಿಃ 05-04-2021 ರಂದು ಸ್ವೀಕರಿಸಿರುತ್ತೇನೆ. ಚಾಸಾ-21 ರವರು ಗುಜ್ಜಿಕೊಂಡ ಗ್ರಾಮದಲ್ಲಿ ಸರ್ವೇ ನಂಬರ 13 ರ ಜಮೀನಿನಲ್ಲಿ ಕಲ್ಲು ಕ್ವಾರಿಯ ಬಗ್ಗೆ ಮಾಹಿತಿಯನ್ನು ಒದಗಿಸಲು ಕೋರಿಕೆ ಪತ್ರವನ್ನು ಸಲ್ಲಿಸಿರುತ್ತಾರೆ. ಸದರಿ ಮನವಿ ಪತ್ರವನ್ನು ನಿಪಿ-13 ಅಂತ ಗುರುತಿಸಲಾಯಿತು. ನಾನು ದಿಃ 09-04-2021 ರಂದು ಸದರಿ ಸರ್ವೇ ನಂಬರ 13 ರಲ್ಲಿ ಯಾವುದೇ ಕಲ್ಲು ಗಣಿಗಾರಿಕೆಗೆ ಮಂಜೂರಾತಿಯನ್ನು ನೀಡಿರುವುದಿಲ್ಲ ಅಂತ ವರದಿಯನ್ನು ಸಲ್ಲಿಸಿದ್ದೇನೆ. ಆ

ವರದಿಯನ್ನು ಈಗ ನೋಡುತ್ತಿದ್ದು, ಅದನ್ನು ನಿಪಿ-14 ಅಂತ, ಸಾಕ್ಷಿ ಸಹಿಯನ್ನು ನಿಪಿ-14(ಎ) ಅಂತ ಗುರುತಿಸಲಾಯಿತು. ಆರೋಪಿ ಕಂಗವೇಲುರವರು ಕಲ್ಲು ಗಣಿಗಾರಿಕೆ ಗುತ್ತಿಗೆ ಮಂಜೂರಾತಿಗಾಗಿ ಕೋರಿ ಅರ್ಜಿ ಸಲ್ಲಿಸಿದ್ದು, ಅದು ಅರ್ಜಿಯ ಹಂತದಲ್ಲೇ ಇರುತ್ತದೆ ಅಂತ ಮಾಹಿತಿ ಕೊಟ್ಟಿರುತ್ತೇನೆ.

**ಪಾಟೀ ಸವಾಲುಃ ಶ್ರೀ ಬಿ.ಬಿ.ಆರ್., ವಕೀಲರಿಂದ ಆರೋಪಿತರ ಪರವಾಗಿ**:

2. ಕಲ್ಲು ಗಣಿಗಾರಿಕೆಯನ್ನು ಮಂಜೂರಾತಿ ಇಲ್ಲದೇ ಯಾರೂ ಮಾಡುವುದಿಲ್ಲ ಅಂದರೆ ನಿಜ. ಕಲ್ಲು ಗಣಿಗಾರಿಕೆ ಇಲ್ಲದೇ ಆರೋಪಿತರು ಕೆಲಸ ಮಾಡಿಲ್ಲ ಅಂದರೆ ನಿಜ. ಪೊಲೀಸರು ನೀಡಿದ ವರದಿಗೆ ನಾನು ಉತ್ತರ ಕೊಟ್ಟಿದ್ದೇನೆ. ಸಾಕ್ಷಿದಾರರು ಹೇಳುತ್ತಾರೆ ಆರೋಪಿತರು ಅಲ್ಲಿ ಕೆಲಸ ಮಾಡುತ್ತಿದ್ದರು. ಕಲ್ಲು ಗಣಿಗಾರಿಕೆ ನಡೆಯುತ್ತಿದ್ದ ಬಗ್ಗೆ ನಾನು ಖುದ್ದಾಗಿ ನೋಡಿಲ್ಲ. ಕಲ್ಲು ಗಣಿಗಾರಿಕೆ ನಡೆಯುತ್ತಿದ್ದ ಬಗ್ಗೆ ನಾನು ಖುದ್ದಾಗಿ ಭೇಟಿ ನೀಡಿ ವರದಿ ಕೊಟ್ಟಿಲ್ಲ.

**ಮರುವಿಚಾರಣೆಃ** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓದಿ, ಹೇಳಿ, ಕೇಳಿ, ಸರಿ ಇದೆ.

Sd/-

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದಾವಣಗೆರೆ.